ದಿನಾಂಕ: 01-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿಸವಾಲು: ಶ್ರೀ ಎಸ್ ಜಿ ಪಿ ವಕೀಲರಿಂದ:-**

1. ನಾನು ಬಿ ಎ ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ದಾವಾ ಆಸ್ತಿ ಬಗ್ಗೆ ಗೊತ್ತಿದೆ. ಪಿತ್ರಾರ್ಜಿತ ಆಸ್ತಿಯನ್ನು ಪ್ರತಿವಾದಿ ಖರೀದಿಸಿದ್ದರಿಂದ ಈ ಕೇಸ್ ನ್ನು ಹಾಕಿರುತ್ತೇನೆ. ದಾವಾದ ಆಸ್ತಿ ಸ ನಂ 10, ಅದು 24 ಎಕರೆ 04 ಗುಂಟೆ ಇರುತ್ತದೆ. ನನಗೆ ಬರುವ 04 ಎಕರೆ 04 ಗುಂಟೆ ಮೇಲೆ ಕೇಸ್ ಹಾಕಿರುತ್ತೇನೆ. ಕೇಸ್ ಹಾಕುವಾಗ ಪಹಣಿ ನೋಡಿದ್ದೇನೆ. ಅದು ಬೀಮ್ಯಲ್ಲಾ ತಂದೆ ಮುನಿಯಾನ ಹೆಸರಿಗೆ ಇದೆ. ಈಗ ಸ್ಥ್ಯ ಪಹಣಿ ತಿಪ್ಪಣ್ಣನ ಹೆಸರಿಗೆ ಇದೆ. ನಮ್ಮ ತಾತನ ಹೆಸರು ಕೂಡಾ ಇದೆ. ತಿಪ್ಪಣ್ಣನ ಹೆಸರಿಗೆ ಯಾವ ಆಧಾರದ ಮೇಲೆ ಪಹಣಿ ಬಂದಿದೆ ಗೊತ್ತಿಲ್ಲ. 1999 ರಲ್ಲಿ ಖರೀದಿ ಪತ್ರ ಆಗಿದೆ ನಾನು ಹುಟ್ಟಿದ್ದು 1986 ನೇ ಇಸ್ವಿಯಲ್ಲಿ. ಖರೀದಿಯಾಗುವ ನನಗೆ ವಯಸ್ಸು 13 ವರ್ಷ ಎಂದರೆ ಸರಿ. ಯಾವ ಕಾರಣಕ್ಕೆ ಖರೀದಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ತಾತನು ಏಕೆ ಮಾರಾಟ ಮಾಡಿದನು ಎಂದು ಹೇಳಲು ಆಗುವುದಿಲ್ಲ. ಸದರಿ ಕ್ರಯಪತ್ರ ನೋಂದಣಿಯಾಗಿದೆ ಖರೀದಿ ಪತ್ರ ಆಗುವಾಗ ನನ್ನ ತಾತಾ ಓದಿ ಹೇಳಿದ ನಂತರ ತಿಳಿದುಕೊಂಡು ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.

2. 2000 ನೇ ಇಸ್ವಿಯಲ್ಲಿ ತಿಪ್ಪಣ್ಣವರು ನನಗೆ ಖರೀದಿ ಪತ್ರ ಆದ ಬಗ್ಗೆ ತಿಳಿಸಿದರು. ನಾನು ಮೋಸ ಮಾಡಿ ಆಸ್ತಿ ತೆಗೆದುಕೊಂಡ ಬಗ್ಗೆ ಪ್ರತಿವಾದಿಗಳ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿಲ್ಲ. ಮೊದಲು ಮುನಿಯಾ ತಂದೆ ಬೀಮ್ಯಲ್ಲಾ. ಜಾಂಪ್ಯಾ ತಂದೆ ಮುನಿಯಾ. ಇನ್ನೂಳಿದ ಇಬ್ಬರ ಹೆಸರು ಗೊತ್ತಿಲ್ಲ. ನನ್ನ ತಾತಾ ತೀರಿಕೊಂಡು 45 ವರ್ಷ ಆಗಿದೆ. ನಾನು ದಾವೆಯಲ್ಲಿ ನನ್ನ ತಾತ 45 ವರ್ಷದ ಹಿಂದೆ ತೀರಿಕೊಂಡಿದ್ದಾನೆ ಅಂತಾ ಹೇಳಿ ಬರೆಸಿದ್ದೇನೆ. ಮೊದಲು 24 ಎಕರೆ 25 ಗುಂಟೆ ಜಮೀನು ಇತ್ತು ಅದರ ಪೈಕಿ ನನ್ನ ತಾತನಿಗೆ ಸಂಬಂಧಿಸಿದ 04 ಎಕರೆ 04 ಗುಂಟೆ ಮಾತ್ರ ಮಾರಾಟ ಮಾಡಿರುತ್ತಾರೆ ನಮ್ಮ ತಾತಾ ಮಾರಾಟ ಮಾಡಿದ್ದು ನಮ್ಮ ತಂದೆಗೆ ಮತ್ತು ನಮಗೂ ಗೊತ್ತಿಲ್ಲ.

ಸಾಮಾನ್ಯವಾಗಿ ಖರೀದಿ ಪತ್ರ ಆದಾಗ ಅದೇ ದಿನ ಸ್ವಾಧೀನಕೊಡುತ್ತಾರೆಂದರೆ ಸರಿ. ಖರೀದಿ ಪತ್ರ ಆದ ಮೇಲೆ ಸ್ವಾಧೀನತೆಯನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ ನಾನೇ ಸ್ವಾಧೀನದಲ್ಲಿರುತ್ತೇನೆಂದು ನುಡಿಯುತ್ತಾರೆ. ಖರೀದಿ ಪತ್ರ ಆದಾಗಿನಿಂದ ತಿಪ್ಪಣ್ಣ ಸ್ವಾಧೀನತೆಯಲ್ಲಿದ್ದಾನೆಂದರೆ ಸರಿಯಲ್ಲ. ನಾನು 30-35 ವರ್ಷದಿಂದ ಕಬ್ಜಾದಲ್ಲಿದ್ದೇನೆ. ನಾನು ಕಬ್ಜೆಯಲ್ಲಿಲ್ಲ ಪ್ರತಿವಾದಿ ಕಬ್ಜಾದಲ್ಲಿದ್ದಾನೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವಾದ ಆಸ್ತಿಯ ಪೂರ್ವಕ್ಕೆ ಈರಪ್ಪನ ಹೊಲ. ಪಶ್ಚಿಮಕ್ಕೆ ಯಮನಪ್ಪನ ಹೊಲ. ಉತ್ತರ ಕ್ಕೆ ಈರಪ್ಪನ ಹೊಲ. ದಕ್ಷಿಣ ಕ್ಕೆ ಸರ್ವೆ ನಂಬರ್ 10 ರ ಉಳಿದ ಜಮೀನು. ದಾವಾದ ಆಸ್ತಿಯಲ್ಲಿ ಸಜ್ಜೆ ಕಾಳು ಕಡಿ ಬೆಳೆಯುತ್ತೇವೆ. ಬೆಳೆದ ಬೆಳೆಯನ್ನು ಲಿಂಗಸೂಗೂರು ಎ ಪಿ ಎಮ್ ಸಿ ಯಲ್ಲಿ ಮಾರಾಟ ಮಾಡುತ್ತೇವೆ ಅದಕ್ಕೆ ಸಂಬಂಧಿಸಿದ ದಾಖಲಾತಿ ಹಾಜರುಪಡಿಸಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
ಸಹಿ/-
( ಚಂದ್ರಶೇಖರ ಪಿ. ದಿಡ್ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.